ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

ಸಂಖ್ಯೆ: ಸಿಎಸ್-2/ಕಶಾಪಮ/ಪಿಯುಗಣಕ/ 2023-24 ದಿನಾಂಕ:20-01-2023

-::ಸುತ್ತೋಲೆ::-

ವಿಷಯ: ಮಾರ್ಚ್ 2024ರ ದ್ವಿತೀಯ ಪಿ.ಯು.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಕರಡು ಪ್ರವೇಶ ಪತ್ರಗಳನ್ನು ಕರ್ನಾಟಕ ಶಾಲಾ ಪರೀಕ್ಷೆ, ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣ www.kseab.karnataka.gov.in ನ PU EXAM PORTAL LOGIN ನಲ್ಲಿ ನೀಡಿರುವ ಬಗ್ಗೆ.

--*-*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾರ್ಚ್ 2024ರ ದ್ವಿತೀಯ ಪಿ.ಯು.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಕರಡು ಪ್ರವೇಶ ಪತ್ರಗಳನ್ನು, ಕರ್ನಾಟಕ ಶಾಲಾ ಪರೀಕ್ಷೆ, ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣ www.kseab.karnataka.gov.in ನ PU EXAM PORTAL LOGIN ನಲ್ಲಿ ನೀಡಲಾಗಿರುತ್ತದೆ, ಕರಡು ಪ್ರವೇಶ ಪತ್ರವನ್ನು ಪ್ರಾಂಶುಪಾಲರು ಡೌನ್ ಲೋಡ್ ಮಾಡಿಕೊಂಡು, ಕರಡು ಪ್ರವೇಶ ಪತ್ರಗಳಲ್ಲಿ ನೀಡಲಾಗಿರುವ ಪ್ರತಿ ವಿದ್ಯಾರ್ಥಿಯ ಮಾಹಿತಿಯನ್ನು ಖುದ್ದಾಗಿ ಪರಿಶೀಲಿಸಲು ಈ ಮೂಲಕ ಸೂಚಿಸಿದೆ. ಕರಡು ಪ್ರವೇಶ ಪತ್ರಗಳಲ್ಲಿ ನೀಡಲಾಗಿರುವ ವಿದ್ಯಾರ್ಥಿಗಳ ಮಾಹಿತಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ಕಾಲೇಜಿನ ಪ್ರಾಂಶುಪಾಲರು ಪಾಲಿಸಬೇಕಾದ ಕ್ರಮಗಳನ್ನು ಈ ಕೆಳಗಿನಂತೆ ವಿವರಿಸಿದೆ.

1. ಕರಡು ಪ್ರವೇಶ ಪತ್ರದ ಪಟ್ಟಿಯಲ್ಲಿ ಯಾವುದೇ ವಿದ್ಯಾರ್ಥಿಯ ಮಾಹಿತಿಯು ನಮೂದಾಗದಿದ್ದಲ್ಲಿ ಅಥವಾ ಮಾಧ್ಯಮ, ವಿಷಯ ತಿದ್ದುಪಡಿ, ಸಂಯೋಜನ ತಿದ್ದುಪಡಿಗಳಿದ್ದಲ್ಲಿ SATSನಲ್ಲಿ ತಿದ್ದುಪಡಿಮಾಡಿದ ನಂತರ ಸೂಕ್ತ ದಾಖಲೆಗಳೊಂದಿಗೆ (SSLC MARKCARD, I PU RESULT SHEET, SATS CHECKLIST) ಜಿಲ್ಲಾ ಉಪನಿರ್ದೇಶಕರ ಶಿಫಾರಸ್ಸಿನೊಂದಿಗೆ ಮಂಡಲಿಯ ಸಂಬಂಧಿಸಿದ ಜಿಲ್ಲಾ ಶಾಖಾಧಿಕಾರಿಗಳಿಗೆ ದಿನಾಂಕ 30.01.2024 ರೊಳಗೆ ನೇರವಾಗಿ ಸಲ್ಲಿಸುವುದು.
2. ಕರಡು ಪ್ರವೇಶ ಪತ್ರದಲ್ಲಿ ವಿದ್ಯಾರ್ಥಿಯ ಹೆಸರು, ತಂದೆ ತಾಯಿಯ ಹೆಸರು ,ಲಿಂಗ, ವರ್ಗ ತಿದ್ದುಪಡಿಗಳಿದ್ದಲ್ಲಿ SATSನಲ್ಲಿ ತಿದ್ದುಪಡಿಮಾಡಿದ ನಂತರ ಸೂಕ್ತ ದಾಖಲೆಗಳೊಂದಿಗೆ (SSLC MARKCARD, SATS CHECKLIST) ಮಂಡಲಿಯ ಸಂಬಂಧಿಸಿದ ಜಿಲ್ಲಾ ಶಾಖಾಧಿಕಾರಿಗಳಿಗೆ ದಿನಾಂಕ 30.01.2024 ರೊಳಗೆ ನೇರವಾಗಿ ಸಲ್ಲಿಸುವುದು.
3. ವಿದ್ಯಾರ್ಥಿಯ ಭಾವಚಿತ್ರದಲ್ಲಿ ಯಾವುದೇ ವ್ಯತ್ಯಾಸಗಳಿದ್ದಲ್ಲಿ, ವಿದ್ಯಾರ್ಥಿಯ ಭಾವಚಿತ್ರವನ್ನು ಮತ್ತೊಮ್ಮೆ ಅಪ್ಲೋಡ್ ಮಾಡಲು UPDATE OPTION ಮೂಲಕ ಕಾಲೇಜು ಲಾಗಿನ್ ನಲ್ಲಿ ಪ್ರಾಂಶುಪಾಲರಿಗೆ ಅವಕಾಶ ನೀಡಲಾಗಿದೆ. ವಿದ್ಯಾರ್ಥಿಯ ಭಾವಚಿತ್ರದ ವ್ಯತ್ಯಾಸ ಸರಿಪಡಿಸಲು ಇದು ಕಡೆಯ ಅವಕಾಶವಾಗಿದ್ದು , ಮುಂದಿನ ದಿನಗಳಲ್ಲಿ ಭಾವಚಿತ್ರ ತಿದ್ದುಪಡಿಗೆ ಯಾವುದೇ ಅವಕಾಶ ನೀಡಲಾಗುವುದಿಲ್ಲ, ಹಾಗೂ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗುತ್ತಾರೆ.

Scanned with OKEN Scanner

4. ಕರಡು ಪ್ರವೇಶ ಪತ್ರ ಬಂದಿರುವ ವಿದ್ಯಾರ್ಥಿಗಳ ಪಟ್ಟಿಯಿಂದ ಯಾವುದೇ ವಿದ್ಯಾರ್ಥಿಯ ಹೆಸರನ್ನು ಡಿಲೀಟ್ ಮಾಡಲು REMOVE OPTION ಮುಖಾಂತರ ಸೂಕ್ತ ಕಾರಣವನ್ನು (SHORTAGE OF ATTENDANCE, FEES NOT PAID, NOT ADMITTED,TC ISSUED, DISCONTINUED, DEATH ಇತ್ಯಾದಿ) ನಮೂದಿಸಿ ಕಾಲೇಜು ಲಾಗಿನ್ ನಲ್ಲಿ ಪ್ರಾಂಶುಪಾಲರು ಡಿಲೀಟ್ ಮಾಡುವುದು.
5. ಯಾವುದೇ ವಿದ್ಯಾರ್ಥಿಯ ಮಾಹಿತಿಯನ್ನು DELETE ಮಾಡಿದ ನಂತರ ಮತ್ತೊಮ್ಮೆ ADD ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ DELETE ಮಾಡುವ ಮುನ್ನ ಪ್ರಾಂಶುಪಾಲರು ಪರಿಶೀಲಿಸುವುದು,

ಮೇಲೆ ಸೂಚಿಸಿರುವ ಎಲ್ಲಾ ಆನ್ ಲೈನ್ ಪ್ರಕ್ರಿಯೆಗಳನ್ನು ದಿನಾಂಕ:30-01-2024ರೊಳಗೆ ಕಾಲೇಜಿನ ಪ್ರಾಂಶುಪಾಲರು ಖುದ್ದಾಗಿ ತಮ್ಮ ಲಾಗಿನ್ ನಲ್ಲಿ ನಿರ್ವಹಿಸುವುದು. ನಮೂದಿಸಿರುವ ಮಾಹಿತಿಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಮುಂದಿನ ಆಗು ಹೋಗುಗಳಿಗೆ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗುತ್ತಾರೆ.

(ಸೂಚನೆ: ಸದರಿ ಪ್ರಕ್ರಿಯೆಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮಂಡಲಿಯ ಜಾಲತಾಣದಲ್ಲಿ ನೀಡಿರುವ ಸಂಬಂಧಿಸಿದ ಜಿಲ್ಲಾ ಶಾಖಾಧಿಕಾರಿಗಳನ್ನು ಸಂಪರ್ಕಿಸಲು ತಿಳಿಸಿದೆ.)

ಅಧ್ಯಕ್ಷರು
ಕರ್ನಾಟಕ ಶಾಲಾ ಪರೀಕ್ಷೆ ಮತ್ತು
ಮೌಲ್ಯನಿರ್ಣಯ ಮಂಡಲಿ.

ಪ್ರತಿಗಳನ್ನು.

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.
3. ಮಾನ್ಯ ಅಧ್ಯಕ್ಷರ ಆಪ್ತ ಶಾಖೆಗೆ ಮಾಹಿತಿಗಾಗಿ.

Scanned with OKEN Scanner